# ಯು.ಆರ್ ಅನಂತಮೂರ್ತಿಯವರ ಕಾದಂಬರಿಗಳಲ್ಲಿ ಪರಂಪರೆ ಮತ್ತು ಆಧುನಿಕತೆ

- ಡಾ. ಮಹಾಂತೇಶ ಪಾಟೀಲ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ-೫೭೭೦೦೭.
೮೭೨೨೭೨೬೮೮೬/ ೮೯೭೦೯೦೦೬೦೫.

ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿ ಪ್ರಕಾರದಲ್ಲಿ ಸಾಕಾರ ರಚನೆಗಳನ್ನು ಮಾಡಿದವರಲ್ಲಿ ಯು.ಆರ್ ಅನಂತಮೂರ್ತಿ ಅಗ್ರಗಣ್ಯರು. ನವ್ಯಕಾವ್ಯ ಧೋರಣೆಯ ಪ್ರಾತಿನಿಧಿಕ ಲೇಖಕರಾಗಿ ಗೋಪಾಲಕೃಷ್ಣ ಅಡಿಗರನ್ನು ಗುರುತಿಸಿದಂತೆ, ನವ್ಯ ಸಾಹಿತ್ಯ ಆಶಯಗಳನ್ನು ಕಾದಂಬರಿ ಮೂಲಕ ಅನಂತಮೂರ್ತಿಯವರು ಅಭಿವ್ಯಕ್ತಿಸಿದರು. ನವ್ಯ ಕಾದಂಬರಿಗಳು ಪರಂಪರೆಯನ್ನು ನಿರಾಕರಿಸುವ, ಆಧುನಿಕತೆಯನ್ನು ಮೈಗೂಡಿಸುವ ಸರಳ ರೇಖಾತ್ಮಕ ಕ್ರಮವನ್ನು ಅನುಸರಿಸದಂತೆ ಕಂಡರೂ, ಅವುಗಳನ್ನು ಮುಖಾಮುಖಿ ಆಗುವಾಗ ಹುಟ್ಟಿಕೊಂಡ ಸಂಘರ್ಷ, ಸಂಕೀರ್ಣತೆ, ಸಾಮಾಜೀಕರಣದ ವಿಧಾನಗಳು- ಕನ್ನಡದಲ್ಲಿ ಹಲವು ವಾಗ್ವಾದಗಳನ್ನು ಹುಟ್ಟಿಹಾಕಿದವು. ಕನ್ನಡ ನವ್ಯ ವಿಮರ್ಶೆಯು ಬಹುವಾಗಿ ಅವರ ಕಾದಂಬರಿಗಳನ್ನು ವಾಗ್ವಾದಗಳಿಗಾಗಿ ಬಳಸಿಕೊಂಡಿದೆ. ಸಂಪ್ರದಾಯ ಪರ ಸಾಹಿತ್ಯ ಮನಸ್ಸುಗಳು, ಆಧುನಿಕತೆಯ ಅನುಕರಿಸುವ ಮನಸ್ಸುಗಳು. ಅವೆರಡನ್ನು ಪ್ರತಿನಿಧಿಸುವ ಪಾತ್ರಗಳು ಅನಂತಮೂರ್ತಿ ಕಾದಂಬರಿಗಳಲ್ಲಿವೆ. ಈ ದೃಷ್ಟಿಯಿಂದ ಅವರ ಸಂಸ್ಕಾರ, ಭಾರತೀಪುರ, ಅವಸ್ಥೆ. ಭವ, ದಿವ್ಯ ಹಾಗೂ ಪ್ರೀತಿ ಮೃತ್ಯು ಮತ್ತು ಭಯ ಕಾದಂಬರಿಗಳನ್ನು ವಿವೇಚಿಸಲಾಗಿದೆ.

ಯು.ಆರ್ ಅನಂತಮೂರ್ತಿಯವರ ಮೊದಲ ಮತ್ತು ಅವರ ಮುಖ್ಯ ಕಾದಂಬರಿ 'ಸಂಸ್ಕಾರ' (೧೯೬೫). ದುರ್ವಾಸಪುರ ಅಗ್ರಹಾರದ ಬ್ರಾಹ್ಮಣನಾಗಿ ಹುಟ್ಟಿದ ನಾರಾಯಣಪ್ಪ, ಶೂದ್ರ ಚಂದ್ರಿಯ ಜೊತೆ ಹೊಂದಿದ ಸಂಬಂಧ, ಅವನ ಸಾವಿನ ನಂತರ ಶವಸಂಸ್ಕಾರದ ಪ್ರಶ್ನೆಯು ಇಡೀ ಅಗ್ರಹಾರದ ಬ್ರಾಹ್ಮಣರಿಗೆ ಸವಾಲಾಗಿ, ಪ್ರಾಣೇಶಾಚಾರ್ಯರಿಗೆ ಸಂಕೀರ್ಣತೆಯಾಗಿ ತೋರುತ್ತದೆ. ಜಾತಿ ಮೀರಿದ ನಾರಣಪ್ಪನನ್ನು ಜಾತಿಯ ಆಚರಣೆಗಳಂತೆಯೇ ಶವಸಂಸ್ಕಾರದ ಪ್ರಶ್ನೆಯನ್ನು ಇಟ್ಟುಕೊಂಡು, ಅದರ ಸುತ್ತ ಕಥಾನಕವನ್ನು ಬಿಚ್ಚಿಡುವುದು ಕಾದಂಬರಿಕಾರರ ಆಶಯ. ಆದರೆ ಕಾದಂಬರಿಯಲ್ಲಿ ನಾರಣಪ್ಪನ 'ಸಂಸ್ಕಾರ'ದ ವಿಚಾರಕ್ಕಿಂತ, ನಾರಾಯಣಪ್ಪ ಮತ್ತು ಪ್ರಾಣೇಶಾಚಾರ್ಯ ಚಂದ್ರಿಯೊಂದಿಗಿನ ಸಂಬಂಧದ ಪ್ರಶ್ನೆಯು ಮುನ್ನೆಲೆಗೆ ಬಂದು ಹೆಚ್ಚು ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ.

ಜಾತಿಸಂಕರವನ್ನು ನಿರಾಕರಿಸುವ ಬ್ರಾಹ್ಮಣ್ಯದ ಮನಸ್ಸು, ಬ್ರಾಹ್ಮಣ ಪುರುಷ ಮತ್ತು ಶೂದ್ರ ಮಹಿಳೆ ಸಂಬಂಧವನ್ನು ನಿಷಿದ್ಧವೆಂದು ಸೂಚಿಸುತ್ತದೆ. ಬ್ರಾಹ್ಮಣ್ಯದ ಪಾವಿತ್ರ್ಯದ ಕಾವಲುಗಾರನಾಗಿ ಪ್ರಾಣೇಶಾಚಾರ್ಯನಿದ್ದರೆ, ಅದರ ಪಾವಿತ್ರ್ಯ ನಾಶದ ಆಗಂತುಕನಾಗಿ ನಾರಾಯಣಪ್ಪನಿದ್ದಾನೆ. ಈ ಇಬ್ಬರಲ್ಲಿ ಒಬ್ಬರು ಸಾಮಾಜಿಕ ಚಲನೆಯೆಡೆಗೆ ಆಸಕ್ತನಾಗಿದ್ದರೆ, ಮತ್ತೊಬ್ಬ ಸಾಮಾಜಿಕ ಜಡತ್ವವನ್ನು ಪ್ರತಿನಿಧಿಸುತ್ತಾರೆ. ಆಚಾರ್ಯರಿಗೆ ಇರುವ ಧರ್ಮಭೀತಿ, ನಾರಾಯಣಪ್ಪನಿಗೆ ಇಲ್ಲ. ಅವರಿಗೆ ಬದುಕಿನ ಕರ್ಮವನ್ನು ಅನುಸರಿಸಬೇಕು, ಅನುಭವಿಸಬೇಕು ಎನ್ನುವ ಅನಿವಾರ್ಯ ಸಂಕಟ ಎನಿಸುತ್ತದೆ. ಅವರ ಮಾನಸಿಕ ಕ್ಷೋಭೆಯನ್ನು ವಿವರಿಸುವುದು ಸಹ ಕಾದಂಬರಿಯ ಹಲವು ಧ್ಯೇಯಗಳಲ್ಲಿ ಒಂದು.

'ಸಂಸ್ಕಾರ'ದ ಕಥೆಯೊಳಗೆ ಮೊದಲು ಕಾಣಿಸಿಕೊಳ್ಳುವ 'ಪ್ಲೇಗ್' ರೋಗವು ಜಿಡ್ಡುಗಟ್ಟಿದ ಭಾರತೀಯ ಸಾಂಪ್ರದಾಯಿಕ ಧರ್ಮವನ್ನು ಸಾಂಕೇತಿಸುತ್ತದೆ. ಸಮುದಾಯವೊಂದು ಧಾರ್ಮಿಕ ಜಡತ್ವದಿಂದ ಕೊಳೆಯುತ್ತಿರುವ

ರೀತಿಯನ್ನು ಧ್ವನಿಸುತ್ತದೆ. ಈ ಪರಿಸರದಿಂದ ಮೊದಲು ಸಿಡಿದು ನಿಂತವನು ನಾರಾಯಣಪ್ಪ. ಆ ಮೇಲೆ ಪ್ರಾಣೇಶಾಚಾರ್ಯ. ಇಬ್ಬರು ಸಿಡಿದು ನಿಲ್ಲಲು ಸ್ಫೋಟಕ ಶಕ್ತಿಯಾಗಿ 'ಚಂದ್ರಿ'ಯಿದ್ದಾಳೆ. ಈ ಕಾರಣದಿಂದ ರಹಮತ ತರೀಕೆರಿಯವರು 'ಈ ಕಾದಂಬರಿಯಲ್ಲಿ ಸ್ವತಂತ್ರ ವ್ಯಕ್ತಿತ್ವ ಇರುವ ಏಕೈಕ ಪಾತ್ರ ಚಂದ್ರಿಯೆಂದು ಗುರುತಿಸುತ್ತಾರೆ. ನವ್ಯ ಸಾಹಿತ್ಯದ ಮುಖ್ಯ ಧೋರಣೆಗಳಲ್ಲಿ ವ್ಯಕ್ತಿಕೇಂದ್ರಿತ ಗುಣ, ಕಾಮದ ಚಿತ್ರಣ, ಧಾರ್ಮಿಕ ಮತ್ತು ಜಾತಿ ವಿಘಟನೆ. ಅವೆಲ್ಲವುಗಳು ಕಾದಂಬರಿಯಲ್ಲಿ ಬರುತ್ತವೆ. ನಾರಾಯಣಪ್ಪನ ವ್ಯಕ್ತಿಕೇಂದ್ರೀತ ಸಮಸ್ಯೆ, ಶವಸಂಸ್ಕಾರ ಸಂದರ್ಭದಲ್ಲಿ ಸಮಾಜಕೇಂದ್ರೀತವಾಗಿ ಕಾಣುತ್ತದೆ. ಅಸ್ತಿತ್ವವಾದಿಯ ನಿಲುವುಗಳು ನಾರಾಯಣಪ್ಪ, ಪ್ರಾಣೇಶಾಚಾರ್ಯರ ಪಾತ್ರಗಳಲ್ಲಿ ಹರಡಿಕೊಂಡಿವೆ. ಇಬ್ಬರು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ದಾರಿ ಮಾತ್ರ ಬೇರೆಬೇರೆಯಾಗಿವೆ. ವಾಸ್ತವವಾದಿಯ ಅಸ್ತಿತ್ವಕ್ಕೆ ನಾರಾಯಣಪ್ಪ, ದೈವವಾದಿ ಅಸ್ತಿತ್ವಕ್ಕೆ ಪ್ರಾಣೇಶಾಚಾರ್ಯ ಉದಾಹರಣೆಯಾಗಿ ನಿಲ್ಲುತ್ತಾರೆ. ಅದು ನವ್ಯಸಾಹಿತ್ಯದ ಮನೋಧರ್ಮವಾಗಿದೆ.

ಧರ್ಮದಿಂದ ನಿಷಿದ್ಧವಾದ ಗಂಡು-ಹೆಣ್ಣಿನ 'ಸಂಬಂಧ' ಕಾದಂಬರಿಯ ಮುಖ್ಯಭಾಗ. ನಾರಾಯಣಪ್ಪರ ಜೊತೆಗಿನ ಸಂಬಂಧದ ಬಗ್ಗೆ ಚಂದ್ರಿಗೆ ಇಲ್ಲದ ಜಾತಿಮನೋರೋಗ, ದುರ್ವಾಸಪುರದ ಜಾತಿಯವರಿಗಿದೆ. ಈ ರೋಗವು ಅವಳ ಸ್ಪರ್ಶದಿಂದ ಅವರಿಬ್ಬರ ಜಾತಿರೋಗ ವಾಸಿಯಾಗುತ್ತದೆ. ಅಲ್ಲಿ ಸಂಬಂಧ ಸುಖವಾಗುವ, ಸಂಕೋಲೆಯಾಗುವ ಎರಡು ಧ್ರುವಗಳಿವೆ. ನಾರಾಣಪ್ಪ, ಚಂದ್ರಿಯರಿಗೆ ಸಂಬಂಧ ಸುಖವಾಗಿಯೂ, ಪ್ರಾಣೇಶಾಚಾರ್ಯರಿಗೆ ಸಂಕೋಲೆಯಾಗಿ ನಿಲ್ಲುತ್ತದೆ. ಚಂದ್ರಿಯ ದೆಸೆಯಿಂದ ಆಚಾರ್ಯರಿಗೆ 'ನೈತಿಕ ಪುನರ್ಜನ್ಮ' ಸಾಧ್ಯವಾಗುತ್ತದೆ. ಈ ಸಂಬಂಧವನ್ನು 'ಪುಣ್ಯಾತಿಗಿತ್ತಿ' ಎಂದು ತಿಳಿಯುವಂತಹ ನಿರೂಪಣೆಯ ಹಿಂದೆ ಜಾತಿವಾದಿ ಸುಪ್ತಗುಣವಿದೆ ಎನಿಸುತ್ತದೆ. ಬ್ರಾಹ್ಮಣನೊಬ್ಬನು ಶೂದ್ರ ಮಹಿಳೆಯೊಡನೆ ನಿಷಿದ್ಧ ಸಂಬಂಧವನ್ನು ಸಾಧಿಸಿದಾಗ, ಆ ಸಮುದಾಯ ಪ್ರತಿಕ್ರಿಯೆಯಾಗಿ ಅಗ್ರಹಾರದ ಚಲನವಲವಿದೆ. ಆದರೆ ಶೂದ್ರ ಪಾತ್ರದ ಸಂಬಂಧವು ಪ್ರತಿನಿಧಿಸುವ ಸಮುದಾಯದ ಪ್ರತಿಕ್ರಿಯೆಯು ಗೈರಾಗುವಿಕೆ ಕಾದಂಬರಿಯಲ್ಲಿದೆ.

ಕಾದಂಬರಿಕಾರರು ಚಂದ್ರಿಯ ಮಾತು, ಸಂಭಾಷಣೆಗಿಂತ ಅವಳ ದೇಹಮೀಮಾಂಸೆಯ ವರ್ಣನೆಗೆ ಹೆಚ್ಚು ಅವಕಾಶ ನೀಡಿದ್ದಾರೆ. ಚಂದ್ರಿಯ ಮೂರ್ತ ಪುತ್ಥಳಿ ಮುಖ್ಯವಾಗಿ ಚಿತ್ರಿತವಾಗಿರುವುದು, ಅವಳು ಹೆಣ್ಣೆಂಬ ಕಾರಣದಿಂದ, ಇನ್ನೂ ಅದನ್ನು ವಿವರಿಸುವುದಾದರೆ ಅವಳು ಶೂದ್ರ ಹೆಣ್ಣು ಎಂಬ ಕಾರಣದಿಂದ. ಅವಳು ಭೌತಿಕವಾಗಿ ಚಿತ್ರಿತಗೊಂಡಂತೆ, ಗುಣಾತ್ಮಕವಾಗಿ ಚಿತ್ರಿತಗೊಳ್ಳುವುದಿಲ್ಲ. ಆದರೆ ಅದು ನಾರಾಯಣಪ್ಪ, ಪ್ರಾಣೇಶಾಚಾರ್ಯರ ವಿಚಾರದಲ್ಲಿ ತಿರುವು ಮುರುವಾಗುತ್ತದೆ. ಅವರ ಮನೋಭಾವದ ಚಿತ್ರಣವು ಕಾದಂಬರಿಯಲ್ಲಿ ವಿಸ್ತಾರವಾಗಿದೆ. ಕಾದಂಬರಿಯು ಶೂದ್ರ ಹೆಣ್ಣಿನ ದೇಹ, ಬ್ರಾಹ್ಮಣ ಪುರುಷರ ಮನಸ್ಸನ್ನು ಚಿತ್ರಿಸುವುದರಲ್ಲಿ ಹೆಚ್ಚು ಆಸಕ್ತವಾದಂತಿದೆ.

ಪ್ರಾಣೇಶಾಚಾರ್ಯರು ಚಂದ್ರಿಯೊಡನೆ ರಾತ್ರಿಯೊಂದು ಕಳೆದಾದ ಮೇಲೆ ಮರಳಿ ಅಗ್ರಹಾರಕ್ಕೆ ಬಂದು ಹೀಗೆ ಹೇಳುತ್ತಾರೆ. 'ನಾನು ಪರಿಹಾರ ಹೇಳುವ ಅಧಿಕಾರ ಕಳೆದುಕೊಂಡಿದ್ದೇನೆ. ನೀವು ಮಠಕ್ಕೆ ಹೋಗಿ ಸ್ವಾಮಿಗಳಿಂದ ಪರಿಹಾರ ಪಡೆದುಕೊಳ್ಳಿ' ಎಂದು ಹೇಳುವ ಮಾತಿನ ಹಿಂದೆ, ತಾನು ತೀರ್ಪು ಹೇಳುವ ಅನರ್ಹ ಎನ್ನುವ ಭಾವನೆಯಿದೆ. ಅವರು ಸಂಪ್ರದಾಯ, ಧರ್ಮಶ್ರದ್ಧೆಯ ಪರಿಪಾಲಕನಾಗಿದ್ದರೂ, ಚಂದ್ರಿಯ ಸಂಪರ್ಕಕ್ಕೆ ಬಂದಾಗ, ಅವರ ಬದುಕಿನಲ್ಲಿ ಹೊಸಜಗಿತವನ್ನು ಕಾಣುತ್ತಾರೆ. ಆದರೆ ನಾರಣಪ್ಪನ ಸಂಬಂಧವು ಅಗ್ರಹಾರಕ್ಕೆ ಬಹಿರಂಗವಾದಂತೆ, ಆ ಸಂಬಂಧವು ಬಹಿರಂಗವಾಗುವುದಿಲ್ಲ. ಅವರು ಒಳಗೊಳಗೆ ತಲ್ಲಣಕ್ಕೆ ಒಳಗಾಗುತ್ತಾರೆ. ಕರ್ಮ ಧರ್ಮದಿಂದ ದೇಹಧರ್ಮದೆಡೆಗೆ ಪ್ರಾಣೇಶಾಚಾರ್ಯರ ಮನಸ್ಸು ಚಲಿಸಿ ಬಿಟ್ಟಿದೆ.

ಹಲವು ವಿಮರ್ಶಕರು ನಾರಾಯಣಪ್ಪನ ಪಾತ್ರವನ್ನು ಆಧುನಿಕತೆ ರೂಪಕವಾಗಿ ವಿಶ್ಲೇಷಿಸಿದ್ದಾರೆ. ಆದರೆ ಆ ಪಾತ್ರವನ್ನು ಪರೀಕ್ಷಿಸಿದರೆ, ಅದು ಟೊಳ್ಳು ಆಧುನಿಕನಂತೆ ತೋರುತ್ತದೆ. ಅವನು ಬ್ರಾಹ್ಮಣರ ಅಗ್ರಹಾರದ ಪರಿಸರದೊಳಗಿದ್ದು, ಬ್ರಾಹ್ಮಣ್ಯದ ಆಚಾರ, ಸಂಪ್ರದಾಯಗಳನ್ನು ಮೀರಿದ್ದಾನೆ. ಹಾಗೆ ಮೀರುವಲ್ಲಿ ಅವನಿಗಿರುವ ದೈಹಿಕ ಹಸಿವು ಮುಖ್ಯವಾಗಿದೆ. ಚಂದ್ರಿಯೊಂದಿಗೆ ಪ್ರೇಮದಾಚೆಗಿನ ಕಾಮ ಸಂಬಂಧದ ಹಸಿವು ಒಂದು ಬಗೆಯದಾದರೆ, ದೇವರ

ಹೊಂದದಿಂದ ಮೀನುಗಳನ್ನು ಹಿಡಿದು ತಿನ್ನುವುದು, ಅವನ ಮತ್ತೊಂದು ಬಗೆಯ ಭೌತಿಕ ಹಸಿವಾಗಿದೆ. ಅವೆರಡು ಹಸಿವುಗಳು ವಾಸ್ತವವಾಗಿ ವೈಯಕ್ತಿಕ ನೆಲೆಯವು. ಅವುಗಳಿಗೆ ಸಾಮಾಜಿಕ ಆಶಯವಿಲ್ಲ. ಅವನು ಭೋಗಕ್ಕಾಗಿ, ಭೌತಿಕ ಹಸಿವಿಗಾಗಿ ಬ್ರಾಹ್ಮಣ್ಯವನ್ನು ಮೀರಿದ್ದಾನೆಯೇ ವಿನಹ, ವೈಚಾರಿಕವಾಗಿ ಗಟ್ಟಿತನವನ್ನು ಸಾಧಿಸಿಲ್ಲ. ನಾರಾಯಣಪ್ಪ ಚಂದ್ರಿಯೊಡನೆ ಮದುವೆಯಾಗಿದ್ದರೆ, ಅವನ ವ್ಯಕ್ತಿತ್ವದಲ್ಲಿ ಹೆಚ್ಚು ಪಕ್ವತೆಯನ್ನು ಕಾಣಲು ಸಾಧ್ಯವಾಗುತ್ತಿತ್ತು. ಜಿಗಿಯಲು ಬಂದರೂ ಕೆಸರೊಳಗೆ ಸಿಲುಕಿದ ಕುದುರೆಯಂತೆ, ಅವನ ವ್ಯಕ್ತಿತ್ವವಿದೆ.

ನಾರಾಯಣಪ್ಪ, ಪ್ರಾಣೇಶಾಚಾರ್ಯ ಇಬ್ಬರು ಬ್ರಾಹ್ಮಣ್ಯದ ವರ್ತುಲದೊಳಗಿದ್ದಾರೆ. ಆಚಾರ್ಯರು ಕೇಂದ್ರ ಪರಿಧಿಯಲ್ಲಿದ್ದರೆ, ನಾರಾಯಣಪ್ಪನು ಆ ವರ್ತುಲದ ಅಂಚಿಗೆ ಇದ್ದಾನೆ. ಕಾದಂಬರಿಯ ಕೊನೆಗೆ ಪ್ರಾಣೇಶಾಚಾರ್ಯರು ಸಹ ವರ್ತುಲದ ಅಂಚಿಗೆ ಬಂದು ನಿಲ್ಲುತ್ತಾರೆ. 'ನಾರಾಯಣಪ್ಪ ಬ್ರಾಹ್ಮಣ್ಯದ ವಿರುದ್ಧ ಪ್ರತಿಭಟಿಸುವ ಬ್ರಾಹ್ಮಣ. ಪ್ರಾಣೇಶಾಚಾರ್ಯರು ಬ್ರಾಹ್ಮಣ್ಯದ ಒಂದು ಧ್ರುವವಾದರೆ, ನಾರಾಯಣಪ್ಪ ಮತ್ತೊಂದು ಧ್ರುವವಾಗುತ್ತಾನೆ' ಎನ್ನುವ ಕೀರ್ತಿನಾಥ ಕುರ್ತಕೋಟಿಯವರ ಮಾತು, ಅವರಿಬ್ಬರ ಬಗ್ಗೆ ಅರ್ಧಸತ್ಯದ ವ್ಯಕ್ತಿತ್ವವನ್ನು ಕುರಿತಾಗಿ ಹೇಳಿದಂತಿದೆ. 'ಅವನು ಬ್ರಾಹ್ಮಣ್ಯವನ್ನು ಬಿಟ್ಟರೂ, ಬ್ರಾಹ್ಮಣ್ಯ ಅವನನ್ನು ಬಿಡುವುದಿಲ್ಲ' ಎಂಬ ಮಾತು ನಾರಾಯಣಪ್ಪನ ಬದುಕಿನ ತ್ರಿಶಂಕು ಸ್ಥಿತಿಯನ್ನು ಧ್ವನಿಸುತ್ತದೆ.

ಸಂಸ್ಕಾರ ಕಾದಂಬರಿಯು ಮಡಿವಂತಿಕೆಯ ಸಂಪ್ರದಾಯಿಕ ಆಚರಣೆಗಳಿಂದ ಕೂಡಿದ ಬ್ರಾಹ್ಮಣ ಸಮುದಾಯದ ಪ್ರಾಣೇಶಾಚಾರ್ಯನ ಮನೋಸಂಕಟ, ವಿಘಟಿತ ವ್ಯಕ್ತಿತ್ವ, ಜಡತ್ವಗೊಂಡ ಸಮುದಾಯದ ಕೊಳಕನ್ನು ತೆರೆದಿಡುವ ಬರವಣಿಗೆಯ ಕಥನ. 'ಸಂಸ್ಕಾರ'ದಲ್ಲಿ 'ಸ್ವಅನ್ಯ' ವೈರುಧ್ಯ 'ವೈದಿಕ ವ್ಯವಸ್ಥೆ ಮತ್ತು ಅದರ ವಿರುದ್ಧ ಭಾರತದಲ್ಲೇ ಆರ್ಷೇಯ ಕಾಲದಿಂದ ಕ್ರಿಯಾಶೀಲವಾಗಿರುವ ನಾಸ್ತಿಕ ಅಥವಾ ಲೋಕಾಯತ ಚಿಂತನೆ ಎಂದು ಗುರುತಿಸಬಹುದು. ಈ ಯುಗ್ಮದಲ್ಲಿ ಪ್ರಾಣೇಶಾಚಾರ್ಯರು ಮೊದಲನೆಯ ಹಾಗೂ ನಾರಾಯಣಪ್ಪ ಎರಡನೇ ಘಟಕವನ್ನು ಪ್ರತಿನಿಧಿಸುತ್ತಾರೆ' ಎನ್ನುವ ಸಿ.ಎನ್ ರಾಮಚಂದ್ರನ್‌ರವರ ವಿಶ್ಲೇಷಣೆಯು ಪರಂಪರೆಯನ್ನು 'ಸ್ವ'ದ ನೆಲೆಯಲ್ಲಿ, ಆಧುನಿಕತೆಯನ್ನು 'ಅನ್ಯ'ದ ಭೂಮಿಕೆಯಲ್ಲಿ ನಿರೂಪಿಸಿದಂತಿದೆ. ಸ್ವದೊಳಗೆ ಅನ್ಯವಾಗುವ, ಆತ್ಮೀಯ ಶತ್ರುವಾಗುವ ಪಾತ್ರವು ನಾರಾಯಣಪ್ಪನದು.

ಕಾದಂಬರಿ ಪ್ರಕಟವಾಗಿ ಐವತ್ತು ವರ್ಷ ಕಳೆದ ಸಂದರ್ಭದಲ್ಲಿ ನಟರಾಜ್ ಹುಳಿಯಾರ್‌ರವರು 'ಅನಂತಮೂರ್ತಿಯವರ ತೀವ್ರ ಭಾವಗೀತಾತ್ಮಕ ಪ್ರಜ್ಞೆ ಹಾಗೂ ತೀಕ್ಷ್ಣ ವೈಚಾರಿಕತೆ, ಸಂಸ್ಕೃತಿ, ನಾಗರಿಕತೆ, ಧರ್ಮಗಳ ಬಗೆಗಿನ ಮೂಲಭೂತ ಪ್ರಶ್ನೆಗಳು, ಲೋಹಿಯಾರವರ ಜಾತಿವಿನಾಶದ ಪರಿಕಲ್ಪನೆ, ಶಾಂತವೇರಿ ಗೋಪಾಲಗೌಡರ ಸಖ್ಯ, ಪಶ್ಚಿಮದ ಸಂದೇಹವಾದ, ಬಂಡಾಯ ಗುಣ, ಭೂತಕಾಲದ ಮೌಲ್ಯಗಳನ್ನು ತೀವ್ರ ಪರೀಕ್ಷೆಗೆ ಒಳಪಡಿಸುವ ಆಧುನಿಕ ನಿರೂಪಕ, ಲಾರೆನ್ಸ್ ಕಾದಂಬರಿಗಳು ಹಾಗೂ 'ಸೆವೆಂತ್ ಸೀಲ್' ಸಿನಿಮಾದ ಪ್ರಭಾವ... ಹೀಗೆ ಅನೇಕ ಅಂಶಗಳು ಈ ಕಾದಂಬರಿಯನ್ನು ನಿರೂಪಿಸಿದಂತಿದೆ' ಎನ್ನುತ್ತಾರೆ. ಈ ಕಾದಂಬರಿ ಸಮಾಜಶಾಸ್ತ್ರೀಯ ಓದು, ಸಮಾಜ ವಿಜ್ಞಾನ ಓದು, ಆಧುನಿಕವಾದಿ ಓದು, ಬಂಡಾಯ ಓದು, ದಲಿತ ಓದು, ಮಹಿಳಾ ಓದು, ಮನಶ್ಶಾಸ್ತ್ರೀಯ ಓದು: ಹೀಗೆ ಕಾದಂಬರಿಯು ಒಳಗೊಂಡ ಹಲವು ಆಯಾಮಗಳಿಂದ ವಿವೇಚನೆಗೆ ಒಳಗಾಗುವ ಸಂಕೀರ್ಣ ಆಯಾಮಗಳಿಂದ ಕೂಡಿದ ಕಾದಂಬರಿಯಿದು.

ಅದರ ಜನಪ್ರಿಯತೆಯಿಂದ ೧೯೭೬ರಲ್ಲಿ ಎ.ಕೆ ರಾಮಾನುಜಮ್‌ರವರ ಇಂಗ್ಲೀಷ್ ಭಾಷಾಂತರ ಆಕ್ಸ್ಫರ್ಡ್ ಯುನಿವರ್ಸಿಟಿ ಪ್ರೆಸ್ ನಿಂದ ಪ್ರಕಟವಾಯಿತು. ಅಲ್ಲದೇ ರಶಿಯನ್, ಫ್ರೆಂಚ್, ಹಂಗೇರಿಯನ್, ಜರ್ಮನಿ, ಹಿಂದಿ, ಮರಾಠಿ, ತಮಿಳು, ಮಲಯಾಳಿ, ಬಂಗಾಳಿ, ಪಂಜಾಬಿ, ಒರಿಯಾ ಭಾಷೆಗಳಿಗೆ ಅನುವಾದಗೊಂಡಿದೆ. ೧೯೭೦ರಲ್ಲಿ ಪಟ್ಟಾಭಿರಾಮರೆಡ್ಡಿರವರ ನಿರ್ದೇಶನದಲ್ಲಿ 'ಸಂಸ್ಕಾರ' ಸಿನಿಮಾ ಆಗಿ ತೆರೆಕಂಡು, ರಾಷ್ಟ್ರಪ್ರಶಸ್ತಿಯನ್ನು ಪಡೆಯಿತು. ಗಿರೀಶ್ ಕಾರ್ನಾಡರಿಗೆ 'ನಾರಾಯಣಪ್ಪ' ಪಾತ್ರದ ನಟನೆಗಾಗಿ ರಾಷ್ಟ ಪ್ರಶಸ್ತಿ ಲಭಿಸಿತು. ಓ.ಎಲ್ ನಾಗಭೂಷಣಸ್ವಾಮಿ 'ಸಂಸ್ಕಾರ'ವನ್ನು ರಂಗರೂಪಕ್ಕೆ ಅಳವಡಿಸಿದರು. ಮೈಸೂರಿನ ರಂಗಾಯಣ ತಂಡವು ಹೆಚ್. ಜನಾರ್ಧನರವರ ನಿರ್ದೇಶನದಲ್ಲಿ ರಂಗಪ್ರಯೋಗವನ್ನು ರಾಜ್ಯಾದ್ಯಂತ ಕೈಕೊಂಡು ನಾಟಕರೂಪವನ್ನು ಯಶಸ್ವಿಯಾಗಿಸಿತು.

ಯು.ಆರ್ ಅನಂತಮೂರ್ತಿಯವರ ಬಹುಚರ್ಚಿತ ಮತ್ತು ವಿಫಲ ಕಾದಂಬರಿಯೆಂದು ವಿಮರ್ಶಾ ವರ್ಗವು 'ಭಾರತೀಪುರ'(೧೯೭೩)ವನ್ನು ಗುರುತಿಸುತ್ತದೆ. ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ನಾಯಕನ ಪಾತ್ರವನ್ನು ನಿರೂಪಿಸುವ, ಅದರ ಸಾಫಲ್ಯದಲ್ಲಿ ವೈಫಲ್ಯವನ್ನು ಕಾಣುವ ಚಿತ್ರಣ ಇಲ್ಲಿಯದು. ಇಂಗ್ಲೆಂಡಿನಲ್ಲಿ ಓದಿಕೊಂಡು ಭಾರತೀಪುರಕ್ಕೆ ಹಿಂತಿರುಗಿದ ಜಗನ್ನಾಥನು, ಅಲ್ಲಿನ ಜಾತಿ ಆಚರಣೆಗಳ ಮೀರುವ, ಸಮಾನತೆಗೆ ಹಂಬಲಿಸುವ, ಜೀತಪದ್ಧತಿಯನ್ನು ವಿರೋಧಿಸುವ ವೈಚಾರಿಕ ಮನೋಭಾವದವನು. ವಿದೇಶದಲ್ಲಿರುವಾಗ ಆತನನ್ನು ತಿರಸ್ಕರಿಸುವ ಚಂದ್ರೇಖರ, ಅವನ ಗೆಳತಿಯಾಗಿ ನಡೆಯನ್ನು ಟೀಕಿಸುವ ಮಾರ್ಗರೇಟ್, ಅವನ ವ್ಯಕ್ತಿತ್ವಕ್ಕೆ ಸಾಣೆಹಿಡಿಯುವಂತೆ ಇದ್ದಾರೆ.

ಪಶ್ಚಿಮದ ಚಿಂತನೆಗಳಿಂದ ಪ್ರಭಾವಿತನಾಗಿ ಭಾರತೀಪುರ ಗ್ರಾಮವನ್ನು ಸುಧಾರಿಸಬೇಕೆಂದು ಹೊರಡುವ ಆತನ ಸ್ವಭಾವವು ಸೋಸಾಲಿಸ್ಟ್ ಸುಧಾರಕನ ರೀತಿಯದು. ಸರಳ ರೇಖಾತ್ಮಕ ರಚನೆಯ ಪಾಶ್ಚಾತ್ಯ ಸಮಾಜ, ವಕ್ರರೇಖಾತ್ಮಕ ಭಾರತೀಯ ಸಮಾಜ. ಅವೆರಡರ ತುಲನೆಯೊಡನೆ ಭಾರತೀಪುರದ ಸುಧಾರಣೆಗೆ ಮುಂದಾಗುತ್ತಾನೆ. ಅವನ ಪ್ರಯತ್ನ ಸಮಾಜ ಸುಧಾರಕನೊಬ್ಬನ ತಲ್ಲಣ ಮತ್ತು ವಿಫಲತೆಯ ಚಿತ್ರಣವನ್ನು ಕಾದಂಬರಿಯು ನೀಡುತ್ತದೆ. ಮೈಸೂರಿನ ಸೋಸಾಲಿಸ್ಟ್ ಪಕ್ಷದ ನೇತಾರರು ಜಗನ್ನಾಥನ ಸುಧಾರಣಾವಾದಿ ಚಟುವಟಿಕೆಯನ್ನು ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಾರೆ. ಕಾದಂಬರಿಕಾರರ ಮುಖ್ಯ ಆಶಯ ಸಂಪ್ರದಾಯಶೀಲ ಸಮಾಜವನ್ನು ಆಧುನಿಕಗೊಳಿಸುವುದು. ಮೌಢ್ಯ ಆಚರಣೆ, ನಂಬಿಕೆಗಳನ್ನು ಅಪಮೌಲೀಕರಣಕ್ಕೆ ಗುರಿಮಾಡುವುದಾಗಿದೆ.

ಜಗನ್ನಾಥನು ಪ್ರಯತ್ನಶೀಲ, ಶೂದ್ರರನ್ನು ದೇವಸ್ಥಾನ ಪ್ರವೇಶಿಸುವ ಪ್ರಯತ್ನ ಸಕಾರಾತ್ಮಕ ಫಲಿತಾಂಶ ಸಾಧ್ಯವಾಗಲಿಲ್ಲ. ಆದರೆ ಆತನ ಪ್ರಯತ್ನ ಮಾತ್ರ ನಮ್ಮ ಗಮನ ಸೆಳೆಯುತ್ತದೆ. ಶೋಷಕ ವ್ಯವಸ್ಥೆಯನ್ನು 'ಸೇಕ್' ಮಾಡುವ ಮೂಲಕ, ಶೋಷಿತರ ಬದುಕಿನಲ್ಲಿ ಗಮನಾರ್ಹ ಹೊಸ ಬದಲಾವಣೆಯನ್ನು ತರುವುದಾಗಿದೆ. 'ದೇವರನ್ನು ನಾಶಮಾಡದ ಹೊರತು ನಾವು ಖಂಡಿತ ಕ್ರಿಯೇಟಿವ ಆಗಲಾರೆವು' ಎನ್ನುವ ಧೋರಣೆ ಹೊಂದಿದವನು. ಆತನ ಬದುಕಿನ ಬಹುಮುಖ್ಯ ಧ್ಯೇಯ ಸಮಾನತೆ. ಅವನ ಮೊದಲ ಪ್ರಯತ್ನ ಹೊಲೆಯರನ್ನು ದೇವಸ್ಥಾನದೊಳಗೆ ಪ್ರವೇಶಿಸುವುದು. ಅವರಿಗೆ ಅಕ್ಷರಾಭ್ಯಾಸ ನೀಡಲು, ಮನೆಯಂಗಳದಲ್ಲಿ ಶಿಕ್ಷಣ ಆರಂಭಿಸುವನು. ಹೊಲೆಯರ ದೈವ ಭೂತರಾಯ, ಭೂತರಾಯನ ಒಡೆಯ ಮಂಜುನಾಥಸ್ವಾಮಿ. ಆ ದೇವಾಲಯದೊಳಗೆ ಪ್ರವೇಶವಿಲ್ಲದ ದಲಿತರನ್ನು ಪ್ರವೇಶಿಸುವಂತೆ ಮಾಡಲು ಪ್ರಯತ್ನಿಸುತ್ತಾನೆ. 'ಮುಟ್ಟಿ ಮುಟ್ಟಿ ಮುಟ್ಟಿ' ಎಂದು ಅರಚಲು ಪ್ರಾರಂಭಿಸಿದ. ಈ ಅಮುಕುವ ತಿವಿಯುವ ಸದ್ದಿನಿಂದ ಕಂಗಾಲಾದ ಹೊಲೆಯರು ಯಾಂತ್ರಿಕವಾಗಿ ಮುಂದೆ ಬಂದು ಜಗನ್ನಾಥ ಒಡ್ಡಿದ್ದನ್ನು ಮುಟ್ಟಿದ, ಶಾಸ್ತ್ರ ಮಾಡಿ ಸರಕ್ಕನೆ ಹಿಂದೆ ಸರಿದು ನಿಂತರು'. ಶೋಷಿತರಿಗೆ ತಾವು ಶೋಷಿತರೆ ಎನ್ನುವ ಅರಿವಿರುವುದಿಲ್ಲ. ಭಾರತೀಯ ಸಂದರ್ಭದಲ್ಲಿ ಮುಗ್ಧ ದಲಿತರು ಸಾಮಾಜಿಕ ಮುಖ್ಯವಾಹಿನಿಗೆ ಬರುವುದು ದಿಗಿಲಿನ ಮತ್ತು ಹಿಂಸೆಯ ವಿಷಯವೆನಿಸುತ್ತದೆ. ಆದರೆ ಇಂಗ್ಲೆಂಡಿನಲ್ಲಿ ಓದಿಕೊಂಡು ಬಂದಿರುವ ನಾಯಕನಿಗೆ ಅದು ಸಾಮಾಜಿಕ ನ್ಯಾಯದ, ಸಮಾನತೆಯ ವಿಷಯವಾಗಿದೆ. ದೇವಾಲಯ ಪ್ರವೇಶಿಸುವ ಪ್ರಯತ್ನ ಮಾಡುವ ಮೊದಲು ಅವರೊಳಗೆ ಆಳವಾದ ಪ್ರಜ್ಞೆಯನ್ನು ಮೂಡಿಸಿದ್ದರೆ ಅವನ ಯತ್ನವು ಸಾಫಲ್ಯವಾಗಬಹುದಿತ್ತು.

ಜಗನ್ನಾಥನು ಸಾಮಾಜಿಕವಾಗಿ ನೈತಿಕ ಅರಿವನ್ನು ಉಳ್ಳವನೆನಿಸಿದರೂ ಸಹ ಅವನ ವ್ಯಕ್ತಿತ್ವವು ಲೋಲುಪತೆಯಿಂದ ಕೂಡಿದೆ. ಅವನೊಳಗೆ ಕುಸಿತಗೊಂಡ ವೈಯಕ್ತಿಕ ನೈತಿಕತೆಯಿದೆ. ಅದು ಪಶ್ಚಿಮದ ಜೀವನ ಶೈಲಿಯ ಕುರುಡು ಅನುಕರಣೆಯ ಸೂಚಕವಾಗಿದೆ. ಮನೆಯ ಆಳು ಕಾವೇರಿ, ಜೋಯಿಸರ ಸೊಸೆ ನಾಗವೇಣಿ, ಇಂಗ್ಲೆಂಡಿನ ಗೆಳತಿ ಮಾರ್ಗರೇಟ್- ಈ ಮೂವರನ್ನು ಬಯಸುವ ಜಗನ್ನಾಥನ ವ್ಯಕ್ತಿತ್ವ ಲೋಲುಪ ಅಲ್ಲದೆ ಮತ್ತೇನು?. ಚಂದ್ರಶೇಖರನ ತಿರಸ್ಕಾರ, ಮಾರ್ಗರೇಟ್‌ಳ ಟೀಕೆಯನ್ನು ಅರ್ಥಮಾಡಿಕೊಳ್ಳದ ಅವನು ನೈತಿಕ ಬದ್ಧತೆ, ಆತ್ಮಾವಲೋಕನ ಮನೋಭಾವ ಇಲ್ಲದವನು. ಸಾಮಾಜಿಕ ಕ್ರಾಂತಿ ಮಾಡಲು ಹೋಗಿ ಸೋಲು ಕಾಣುವುದರಲ್ಲಿ ಅಚ್ಚರಿ ಏನಿಲ್ಲ. ಸಂಸ್ಕಾರದ ನಾರಾಯಣಪ್ಪ ದೇಹದ ಹಸಿವಿಗಾಗಿ ಭಿನ್ನನಾಗಿ ತೋರುವಂತೆ, ಭಾರತೀಪುರದ ಜಗನ್ನಾಥನು ಅಪಕ್ವ ಪ್ರಜ್ಞೆಯಿಂದ ಹೋರಾಟದಲ್ಲಿ ಸೋಲುತ್ತಾನೆ. ಅವನ ಸೋಲು ಹೊಲೆಯರ ಸೋಲಲ್ಲ. ಅದು ಅವನದೇ ಟೊಳ್ಳು ನೈತಿಕತೆಯ ಸೋಲಾಗಿ ಕಾಣುತ್ತದೆ.

ಕನ್ನಡದಲ್ಲಿ ರಾಜಕೀಯ ಕಾದಂಬರಿಗಳು ಕಡಿಮೆ. ನವ್ಯ ಮತ್ತು ದಲಿತ ಬಂಡಾಯ ಸಂದರ್ಭದಲ್ಲಿ ಬೆರಳೆಣಿಕೆಯಷ್ಟು ರಾಜಕೀಯ ಕಾದಂಬರಿಗಳು ರಚನೆಯಾದವು. ಯು.ಆರ್ ಅನಂತಮೂರ್ತಿರವರ 'ಅವಸ್ಥೆ' (೧೯೭೮) ನವ್ಯ ಸಂದರ್ಭದ ರಾಜಕೀಯ ಕಥನ. ಕಾದಂಬರಿಯ ನಾಯಕ ಕೃಷ್ಣಪ್ಪ. ಹಿಂದುಳಿದ ಜಾತಿಯಿಂದ ಮುಂಚೂಣಿಗೆ ಬಂದ ಹೋರಾಟ ಮನೋಭಾವದ ಪ್ರಾಮಾಣಿಕ ರಾಜಕೀಯ ನಾಯಕ. ಆದರೆ ಅವನು ಭ್ರಷ್ಟ ಮನಸ್ಥಿತಿಯ ರಾಜಕಾರಣದ ಬಲೆಯಲ್ಲಿ ಸಿಲುಕಿ ಸೋಲುವ ಕಥೆ ಮತ್ತು ರೈತ ಚಳುವಳಿಯ ರಾಜಕೀಯದ ಸೋಲಿನ ಕಥನವನ್ನು ಪ್ರಸ್ತುತ ಕಾದಂಬರಿಯು ನಿರೂಪಿಸುತ್ತದೆ. ಹೀಗಾಗಿ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಬೆಳೆವಣಿಗೆಯ ಹುಳುಕನ್ನು ಚಿತ್ರಿಸುತ್ತದೆ. ವಿಚಾರವಂತಿಕೆ, ಕಲಾತ್ಮಕತೆಯಿಂದ ಅವಸ್ಥೆಯು ಭಾರತದ ರಾಜಕೀಯ ವ್ಯವಸ್ಥೆಯ ಅಂತರಂಗವನ್ನು ಬಹಿರಂಗಗೊಳಿಸುತ್ತದೆ.

ಕಾದAಬರಿಯ ನಾಯಕ ಕೃಷ್ಣಪ್ಪನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ನಾಲ್ಕು ಜನರ ಪಾತ್ರ ಬಹುಮುಖ್ಯವಾದುದು. ಅನುಭಾವದ ಆರಾಧಕನಾದ ಮಹೇಶ್ವರಯ್ಯ, ಕ್ರಾಂತಿಯ ಮನೋಭಾವದ ಅಣ್ಣಾಜಿ, ಗುಡ್ಡದ ಮೇಲಿರುವ ಮುದುಕ ಬೈರಾಗಿ, ದೇಶ ಸುತ್ತುವ, ಕೋಶ ಓದಿನ ವಿವೇಕದೊಡನೆ ಜನರೊಡನೆ ಬೆರೆತು ಹೋರಾಟ ಮಾಡುವ ಗೌರಿ ದೇಶಪಾಂಡೆಯವರ ದೆಸೆಯಿಂದ ಅವನು ನೈತಿಕವಾಗಿ ಘಟ್ಟಿಗೊಳ್ಳುತ್ತಾನೆ. ವಾರಂಗಲ್ ಪೋಲಿಸರಿಂದ ತನ್ನ ತಂದೆಯನ್ನು ಕತ್ತರಿಸಿ ಕೊಂದರೆಂಬ ಮಾಹಿತಿ ತಿಳಿದೊಡನೆ, ಅವನ ಮನಸ್ಸು ಕ್ರಾಂತಿಗೆ ಅಣಿಯಾಗುತ್ತದೆ. ಹುಲಿಯೂರಿನಲ್ಲಿ ವಾಸವಾಗಿದ್ದುಕೊಂಡು ರೈತ ಚಳುವಳಿಯ ಮೂಲಕ ಹೋರಾಟದಲ್ಲಿ ತೊಡಗುವ ಮೂಲಕ ರಾಜಕೀಯಕ್ಕೆ ಪ್ರವೇಶಿಸುತ್ತಾನೆ. ಆದರೆ ರಾಜಕೀಯ ಅವಕಾಶವಾದಿಗಳು ಅವನ ಜನಪ್ರಿಯತೆಯನ್ನು ಬಳಸಿಕೊಂಡು ನಿರ್ಲಕ್ಷಿಸುತ್ತಾರೆ. ಭ್ರಷ್ಟ ವ್ಯವಸ್ಥೆ, ರಾಜಕೀಯ ಲಾಭಿ, ನೈತಿಕ ದಿವಾಳಿತನ, ರಾಜಕೀಯ ಸೋಗಲಾಡಿತ: ಅವೆಲ್ಲವುಗಳಿಂದ ಕಾದಂಬರಿ ನಾಯಕ ಕುಸಿದ ಹೋಗುತ್ತಾನೆ. 'ನಾನು ಮೆತ್ತಗಾಗ್ತ ಬಂದಿದೀನಿ. ಒಳಗಿನಿಂದ ಕೊಳೀತ ಇದೀನಿ' ಎನ್ನುವ ಆತನ ಮಾತು, ಅವನ ಮನೋಕುಸಿತವನ್ನು ಧ್ವನಿಸುತ್ತದೆ. ಅಧಿಕಾರದಾಹಿಗಳ ಎದುರು ಸಾಮಾಜಿಕ ನ್ಯಾಯ, ಸಮಾನತೆ, ಸಾಮೂಹಿಕ ನೈತಿಕತೆಗಳನ್ನು ಅಳವಡಿಸಿಕೊಂಡ ನಾಯಕನ ಬದುಕು ಅರ್ಥಹೀನವೆನಿಸುತ್ತದೆ.

'ನನಗೆ ಪ್ರೇಮ ಮುಖ್ಯ. ಅದನ್ನು ಕಳಕೊಂಡು ಎಂಥ ಕ್ರಾಂತಿ ಮಾಡೋಕೆ ಸಾಧ್ಯ? ಮಾಡಿಯೇನು ಪ್ರಯೋಜನ' ಎಂಬ ಮಾತು ಆದರ್ಶವಾದಿಯ ರಾಜಕೀಯ ನಂಬಿಕೆಯು ಕಾದಂಬರಿ ಕೊನೆಯಲ್ಲಿ ಹುಸಿಯೆನಿಸುತ್ತದೆ. ಲೋಹಿಯಾರ ರಾಜಕೀಯ ಚಿಂತನೆ, ಕಾರ್ಲ್ಮಾರ್ಕ್ಸ್ನ ಸಾಮಾಜಿಕ ನ್ಯಾಯದ ಅರಿವು ನಾಯಕನೊಳಗೆ ಗೂಡುಗಟ್ಟಿದ್ದರೂ ಅಲ್ಲಿನ ರಾಜಕೀಯ ಕ್ರೂರಿಗಳು, ಅವನು ಒಳಗೊಳಗೆ ಉಸಿರುಗಟ್ಟುವಂತೆ ಮಾಡುತ್ತಾರೆ. ಭಾರತ ಪ್ರಜಾಪ್ರಭುತ್ವ ದೇಶವಾದರೂ ಇಲ್ಲಿನ ಅನೈತಿಕತೆ, ರಾಜಕೀಯ ಭ್ರಷ್ಟತೆಗಳು, ಆದರ್ಶ ರಾಜಕೀಯವನ್ನು ಅರಾಜಕಗೊಳಿಸಿವೆ. ನೈತಿಕ ಮೌಲ್ಯಗಳ ಅಧಃಪತನದಿಂದ ಕೃಷ್ಣಪ್ಪನಂತಹ ವ್ಯಕ್ತಿಗಳ ಆದರ್ಶ, ವಾಸ್ತವ ನಿಲುವುಗಳು ತಳಬುಡವಿಲ್ಲದಂತಾಗುವುದು ನಮ್ಮ ರಾಜಕೀಯ ವ್ಯವಸ್ಥೆಗೆ ಹಿಡಿದ ಕೈಗನ್ನಡಿ.

ಒಟ್ಟಿನಲ್ಲಿ ಅವಸ್ಥೆ ಕಾದಂಬರಿಯು ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯದ ಸಮಗ್ರ ನೋಟವನ್ನು ಸೂಕ್ಷ್ಮಗಣ್ಣಿಂದ ನಮ್ಮ ಮುಂದಿಡುತ್ತದೆ. ರೈತ ಚಳುವಳಿಯಂತಹ ಜನಪರ ಹೋರಾಟಗಳ ರಾಜಕಾರಣ, ಅಸಮಾನತೆಯನ್ನು ಪ್ರತಿಭಟಿಸುವ ನಕ್ಸಲ್ ಚಳುವಳಿಯ ಉಗ್ರವಾದ ರಾಜಕಾರಣ, ಮೇಲ್ವರ್ಗ, ಮೇಲ್ಜಾತಿಗಳ ಅವಕಾಶವಾದಿ ರಾಜಕಾರಣ, ಸಂಸದೀಯ ಪ್ರಜಾಪ್ರಭುತ್ವದ ನಿಯಮಗಳ ರಾಜಕಾರಣ, ವರ್ತಮಾನದ ಧರ್ಮ ಮತ್ತು ಜಾತಿರಾಜಕಾರಣ- ಹೀಗೆ ಹಲವು ಬಗೆಯ ರಾಜಕೀಯ ಆಯಾಮಗಳ ಚೌಕಟ್ಟನ್ನು ಕಾದಂಬರಿಯಲ್ಲಿ ತರುವುದರಿಂದ ಸಂಕೀರ್ಣ ಭಾರತ ರಾಜಕಾರಣದ ಜೆರಾಕ್ಸ್ನಂದರಂತೆ ಇಲ್ಲಿನ ಕಥನವಿದೆ. ಮೇಲೆ ಹೇಳಿದಂತೆ ಈ ಕಾದಂಬರಿಯು ಮಾರ್ಕ್ಸ್ವಾದ, ಗಾಂಧಿವಾದ, ಲೋಹಿಯಾವಾದಿ ಹೋರಾಟಗಳನ್ನು ಒಳಗೊಳ್ಳುತ್ತದೆ. ಅದರಲ್ಲಿ ಸಂಕೀರ್ಣತೆಗೆ ಅವಕಾಶವಿಲ್ಲ. ಸಮಾಜ ಸುಧಾರಣಾವಾದಿ ನಿಲುವುಗಳು ರಾಜಕೀಯ ಭ್ರಷ್ಟತೆ, ಅನೈತಿಕತೆ, ಅಪ್ರಾಮಾಣಿಕ ರಾಜಕೀಯ ವ್ಯವಸ್ಥೆಯ ಎದುರು ಮಂಡೆಯೂರುವುದು ವ್ಯಂಗ್ಯದಂತಿದೆ.

'ಭವ'(೧೯೯೪) ಕಾದಂಬರಿಗೆ ಸಂಸ್ಕಾರ, ಭಾರತೀಪುರದಂತೆ ಸಾಮಾಜಿಕ ಆಯಾಮ, ಅವಸ್ಥೆ ಕಾದಂಬರಿಯಂತೆ ರಾಜಕೀಯ ಆಯಾಮವಾಗಲಿ ಇಲ್ಲ. ಅದು ಸಂಸಾರಿಕ ಆಯಾಮವನ್ನು ಚಿತ್ರಿಸುವ ಕಥನವಾಗಿದೆ. ಆಧುನಿಕ ಬದುಕಿನ ಸಮಸ್ಯೆಗಳು ಸಂಸಾರಿಕ ನೆಲೆಯಲ್ಲಿ ವಿವರಿಸಲು ಕಾದಂಬರಿ ಪ್ರಯತ್ನಿಸುತ್ತದೆ. ಬದುಕಿನ ಕುರಿತಾದ ಆಸಕ್ತಿ, ವಿರಕ್ತಿ ಭಾವಗಳೆರಡನ್ನು ಪ್ರತಿನಿಧಿಸುವ ಪಾತ್ರಗಳು ಇಲ್ಲಿವೆ. ಪಶ್ಚಿಮದ ಬದುಕನ್ನು ಅನುಕರಿಸುತ್ತ ಇಲ್ಲಿ ಬೇರೂರಲು ಆಗದ ಮನುಷ್ಯರು ಒಂದೆಡೆಯಾದರೆ, ಭೂತಕಾಲದ ಸನಾತನ ಸಂಪ್ರದಾಯಿಕ ಬದುಕನ್ನು ಆಚರಿಸುತ್ತ ವರ್ತಮಾನದಲ್ಲಿ ಬೇರೂರಲಾಗದ ಮನುಷ್ಯರು ಮತ್ತೊಂದೆಡೆಗೆ. ಬೇರೂಗಳಿಲ್ಲದೇ ಆಕಾಶಕ್ಕೆ ಮಲ್ಲಿಗೆ ಬಳ್ಳಿಯಂತೆ ಬೆಳೆಯಬೇಕೆಂಬ ಮನಸ್ಸು ಸಂಕೀರ್ಣದ್ದು. ಈ ಕಾರಣದಿಂದ ಡಿ.ಆರ್ ನಾಗರಾಜ್‌ರವರು ಹೀಗೆ ಅಭಿಪ್ರಾಯ ಪಡುತ್ತಾರೆ: 'ಭವ ಎಂದರೆ ಇರುವಿಕೆಯೂ ಹೌದು, ಆಗುವಿಕೆಯೂ ಹೌದು. ಮೂರು ತಲೆಮಾರಿಗೆ ಸೇರಿದ ಮೂರು ವ್ಯಕ್ತಿಗಳ ಮೂಲಕ ಅನಂತಮೂರ್ತಿ ತೀವ್ರ ಅನುರಕ್ತ ಮತ್ತು ವಿರಕ್ತಿ ಬೆಳೆಯುವ ಸಂಗಮ ಸ್ಥಾನವನ್ನು ಶೋಧಿಸಿದ್ದಾರೆ. ಇಲ್ಲಿನ ನಾಯಕರೆಲ್ಲರೂ ಸಂಸಾರದ ಒಡಲೊಳಗೆ ತೀವ್ರವಾಗಿ ಮುಳಗಿದ್ದು ಸಂಸಾರ ನಿರ್ವಾಣಕ್ಕಾಗಿ ಹಂಬಲಿಸುವರು. ಆದರೆ ಸರಿಯಾದ ದಾರಿ ಕಾಣದೆ ಕಂಗಾಲಾದವರು' ಎನ್ನುತ್ತಾರೆ. ಜಿ.ಎಸ್ ಆಮೂರವರು ಭವ ಕಾದಂಬರಿಯನ್ನು 'ಭವ ಹಾಗೂ ಐಹಿಕ ಜೀವನದ ಆಹ್ವಾನಗಳು' ಅಭಿವ್ಯಕ್ತಿಯೆಂದು ಹೇಳುತ್ತಾರೆ.

ಸಂಸಾರದ ವಿವೇಕವನ್ನು ಪಶ್ಚಿಮದ ಮನೋಭಾವದಿಂದ ನೋಡುವುದರಲ್ಲಿನ ಪಾತ್ರಗಳ ಬದುಕಿನ ಸಮಸ್ಯೆಗೆ ಕಾರಣವಾಗುತ್ತದೆ. ವಿಶ್ವನಾಥಶಾಸ್ತ್ರಿ ಮತ್ತು ದಿನಕರರ ಜೀವನದ ಪ್ರಜ್ಞಾಪ್ರವಾಹ ಕಾದಂಬರಿಯಲ್ಲಿ ಹಲವು ಕವಲಾಗಿ ಹರಿಯುತ್ತದೆ. ಸಂಸಾರದ ನಿರ್ಮಾಣ ಕ್ರಿಯೆಯಷ್ಟೇ, ನಿರ್ವಾಣ ಕ್ರಿಯೆಯು ಅವರಿಬ್ಬರಿಗೂ ಬದುಕಿನ ಸವಾಲೆನಿಸುತ್ತದೆ. ನಿರ್ವಾಣ ಎನ್ನುವ ಬೌದ್ಧ ಆಧ್ಯಾತ್ಮಿಕ ದರ್ಶನವನ್ನು ಸಂಸಾರದ ನೆಲೆಯಲ್ಲಿಟ್ಟು ಚರ್ಚಿಸುವುದು ಕಾದಂಬರಿಯ ಹೆಚ್ಚುಗಾರಿಕೆ. ಭೌತಿಕ, ಅಂತರಂಗಿಕ, ವಾಸ್ತವ, ಆದರ್ಶ, ನಿರ್ವಾಣ, ನಿರ್ಮಾಣ: ಹೀಗೆ ಅನಂತ ಮುಖಗಳ ಕಥನಗಾರಿಕೆಯು ಕಾದಂಬರಿಯದು. ಬದುಕು ನೈತಿಕ ಆದರ್ಶಕ್ಕಿಂತ ಪ್ರೀತಿಯ ಮೇಲೆ ನಿಂತಿದೆ ಎನ್ನುವುದನ್ನು ಪ್ರತಿಪಾದಿಸುತ್ತದೆ.

ಕಾದಂಬರಿಯಲ್ಲಿ ದಿನಕರನು ಆಕ್ಸ್‌ಫರ್ಡ್ ನಲ್ಲಿ ಓದಿಕೊಂಡು ಬಂದವನು. ಅವನಿಗೆ ಹಣ, ಜನಪ್ರಿಯತೆ, ಪ್ರೇಯಸಿ, ಹೆಂಡತಿ, ಸಂಗಾತಿಗಳಿದ್ದರೂ, ಅವನ ಮನಸ್ಸು ಮಾತ್ರ ಖಾಲಿತನದಿಂದ ಬಳಲುತ್ತಿದೆ. ಬದುಕಿನ ಸಂಬಂಧಗಳಲ್ಲಿ ಆಪ್ತವಾದ ಬಂಧುರತೆಗಿಂತ ಬಂಧನವೆನಿಸಿದ ಕಾರಣ ಬಿಡುಗಡೆಗಾಗಿ ಅವನು ಹಂಬಲಿಸುತ್ತಾನೆ. ಆದರೆ ಬಿಡುಗಡೆ ದೊರಕುತ್ತಿಲ್ಲ. ಹೀಗಾಗಿ ವಿಶ್ವನಾಥಶಾಸ್ತ್ರೀಗಳ ಬದುಕಿಗಿಂತ ಅವನ ಬದುಕು ಹೆಚ್ಚು ಸಂಕೀರ್ಣವು, ಸಮಸ್ಯಾತ್ಮಕವು ಅನ್ನಿಸುತ್ತದೆ. ಪಶ್ಚಿಮ ಮತ್ತು ಪೂರ್ವ ವಿಚಾರಧಾರೆಗಳಿಂದ ಎರಡು ದೋಣಿಯ ಪಯಣದಂತೆ ಅವನ ವ್ಯಕ್ತಿತ್ವವಿದೆ. ಕರಗದ ಹೊರತು, ಬದುಕು ತನಗೆ ಕರುಣೆಯನ್ನು ಕಾಣ್ಕೆಗೊಳ್ಳದು ಎನ್ನುವ ಸತ್ಯ ವೇದ್ಯವಾದಂತೆಲ್ಲಾ ದಿನಕರನು ಪ್ರೀತಿಗಾಗಿ ಹಂಬಲಿಸುತ್ತಾನೆ. ಇಬ್ಬರು ಸಂಸಾರೀಕರ ಭವದ ಕತೆಯನ್ನು ಬಿಡಿಬಿಡಿಯಾಗಿ ನಿರೂಪಿಸಿ, ಅವುಗಳನ್ನು ಮುಖಾಮುಖಿಯಾಗಿಸಿ, ಒಂದು ಒಪ್ಪಿತ ಭವದ ನಿರ್ಣಯಕ್ಕೆ ಕಾದಂಬರಿಕಾರರು ಬರುತ್ತಾರೆ. ಇಲ್ಲಿ ದಿನಕರರ ಭವವು ಒಪ್ಪಿತವಲ್ಲದ, ವಿಶ್ವನಾಥಶಾಸ್ತ್ರೀಗಳ ಭವವು ಸ್ವೀಕಾರಾರ್ಹ ಎನ್ನುವ ನಿರ್ಧಾರಕ್ಕೆ ಬರುತ್ತಾರೆ ಎನ್ನುವುದಕ್ಕೂ ಕಾದಂಬರಿಯಲ್ಲಿ ಸ್ಪಷ್ಟತೆಯಿಲ್ಲ. ಏಕೆಂದರೆ ಬದುಕು ಪ್ರಮೇಯಗಳ ಸರಳ ರೇಖಾತ್ಮಕ ರಚನೆಯಲ್ಲ. ಕಂಡಷ್ಟು ಬದುಕು ಎನ್ನುತ್ತಿರುವಾಗಲೇ ಕಾಣದಷ್ಟು ಬದುಕಿನ ಭಿತ್ತಿಗಳು ಎದುರುಗೊಳ್ಳುವ ಭವದ ವಿಸ್ಮಯವನ್ನು ಕಾದಂಬರಿಯು ಭವದ ಮೂರ್ತ, ಅಮೂರ್ತ ಮುಖಾವಳಿಗಳ ಚಿತ್ತಾರವನ್ನು ಮಂಡಿಸುತ್ತದೆ.

ಭವ ಕಾದಂಬರಿಯ ಮುಂದುವರಿಕೆಯಂತೆ 'ದಿವ್ಯ'(೨೦೦೧) ಕಾದಂಬರಿಯಿದೆ. ಸಂಸ್ಕಾರ, ಭಾರತೀಪುರ, ಅವಸ್ಥೆ, ಭವ ಕಾದಂಬರಿಗಳು ಒಂದಿಲ್ಲೊಂದು ಬಗೆಯ ಸೋಲಿನಲ್ಲಿ ಕೊನೆಗೊಂಡರೆ, 'ದಿವ್ಯ'ದಲ್ಲಿ ಮಾತ್ರ ಗೆಲುವಿನ ಘಟ್ಟಿತನವಿದೆ. ಉಳಿದ ಕಾದಂಬರಿಗಳಲ್ಲಿ ಪುರುಷರ ಸರಣಿ ಸೋಲುಗಳು, ದಿವ್ಯದಲ್ಲಿ ಹೆಣ್ಣಿನ ಗೆಲುವಾಗಿ ಪುನರ್ಭವಿಸುತ್ತವೆ. ಬಾಲವಿಧವೆಯಾಗಿ

ಮುರುಟು ಹೋಗುತ್ತಿರುವ ತನ್ನ ಬದುಕನ್ನು ಆಧುನಿಕ ಮನೋಭಾವದ ಶಿಕ್ಷಣ ಮೂಲಕ ಸಾಕ್ಷಾತ್ಕಾರಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಎದುರಾಗುವ ತಲ್ಲಣ, ತಾಕಲಾಟಗಳು 'ದಿವ್ಯ' ಕಾದಂಬರಿಯ ಹೂರಣ.

ಲೋಕದ ಅನುಭವವೇ ಅರಿವಿಗೆ ಬಾರದ ಮುನ್ನ ಬಾಲ್ಯವಿವಾಹವಾಗಿ, ಗಂಡನ ಸಾವಿನಿಂದ ವಿಧವೆಯಾಗಿ ನತದೃಷ್ಟದ ಬದುಕನ್ನು ಅನುಭವಿಸುತ್ತ, ಅದನ್ನು ಬದಲಿಸಿಕೊಳ್ಳುವ ನಿಟ್ಟಿನಲ್ಲಿ ಅವಳಿಗೆ ಶಿಕ್ಷಣ, ಶಿಕ್ಷಕ ನೆರವಾಗುವುದು ನಾಯಕಿಯ ಬದುಕು ಇಲ್ಲಿಯದು. ಸಂಪ್ರದಾಯ ಪರಿಪಾಲಕನಾದ ತಂದೆಯ ಕಟ್ಟಳೆಗಳನ್ನು ಯಾವುದೋ ಒಂದು ಗಳಿಗೆಯಲ್ಲಿ ಸಡಿಲಿಸಿಕೊಂಡು ಓದನ್ನು ಆರಂಭಿಸುವುದು. ಪ್ರೀತಿಯಿಂದ ವಂಚಿತವಾದ ಅವಳ ಮನಸ್ಸು, ಶಿಕ್ಷಕನ ಒಲುಮೆಗೆ ಕರಗಿ ಮನಸೋತು, ಬದುಕಿನ ಅರ್ಥವು ಹರಳುಗಟ್ಟುತ್ತದೆ. ಅಪ್ಪನ ಕೆಂಗಣ್ಣುಗಳ ಅಡಿಯಲ್ಲಿದ್ದವಳಿಗೆ ಶಿಕ್ಷಕನ ಪ್ರೀತಿಯ ಕಣ್ಣಾವಲು ಆಪ್ತವೆನ್ನಿಸುತ್ತದೆ. ಅವಳ ಹೆಣ್ತನಕ್ಕೆ ಜೀವಂತಿಕೆಯನ್ನು ಒದಗಿಸುವ ಆತ, ಅವಳ ಕಂಗಳ ಕನಸಾಗುತ್ತಾನೆ. ಬದುಕಿನ ಕಾಡು ಕಗ್ಗತ್ತಲಿನ ದಾರಿಯಲ್ಲಿ ನಕ್ಷತ್ರಗಳೆರಡು ಜೋಡಿಯಾದಂತೆ, ಶಿಕ್ಷಕನೊಡನೆ ಒಂದಾಗುತ್ತಾಳೆ. ಸಂಕೋಲೆಗಳ ಊರನ್ನು ತೊರೆದು ನಗರಕ್ಕೆ ಹೊರಡುವ ನಿಟ್ಟಿನಲ್ಲಿ ಪ್ರಯತ್ನಿಸುವಾಗ ಕಾದಂಬರಿ ಸುಖಾಂತ್ಯವನ್ನು ಕಾಣುತ್ತದೆ.

ಅನಂತಮೂರ್ತಿಯವರ ಕೊನೆಯ ಕಾದಂಬರಿ ಪ್ರೀತಿ ಮೃತ್ಯು ಮತ್ತು ಭಯ. ಸಂಸ್ಕಾರ ಕಾದಂಬರಿಗಿಂತ ಮೊದಲ ೧೯೫೫ರಲ್ಲಿ ಬರೆದದ್ದಾದರೂ, ಅದು ಪ್ರಕಟಗೊಂಡಿದ್ದು ೨೦೧೨ರಲ್ಲಿ. ಈ ಕಾದಂಬರಿಯು ಶ್ರೇಷ್ಠ ಬರಹಗಾರನ ಆರಂಭದ ಪ್ರಯೋಗಶೀಲತೆಗೆ ಸಾಕ್ಷಿಯಾಗಿದೆ. ಕಾದಂಬರಿಕಾರರೇ ತಿಳಿಸುವಂತೆ ಅವರ ಸಹೋದರ ವೆಂಕಟೇಶಮೂರ್ತಿ ಸಾವಿನ ನಂತರದಲ್ಲಿ ಬರೆದ ಕಾದಂಬರಿಯಿದು.  ಈ ಕಾದಂಬರಿಗೆ ಸಾಮಾಜಿಕ ಆಯಾಮವಿಲ್ಲ. ಅಲ್ಲಿ ವ್ಯಕ್ತಿಯ ಸ್ವಗತ ಮಾದರಿಯೇ ಪ್ರಧಾನವಾಗಿದೆ. ಕಾದಂಬರಿಯ ಮುಖ್ಯ ಪಾತ್ರ ಶೇಖರನ ದುಗುಡ, ಮಾನಸಿಕ ತುಮುಲು, ಬಲಹೀನತೆ ತೆರೆದುಕೊಳ್ಳುತ್ತವೆ. ಇಲ್ಲಿ ಮನುಷ್ಯನ ಪ್ರೀತಿ ಮತ್ತು ಭಯದ ಕಾರಣದಿಂದ ಮೃತ್ಯುವಿನ ರೂಪದಂತೆ ತೋರುತ್ತದೆ. ತನ್ನ ತಂದೆತಾಯಿಯರ ಇಷ್ಟಕ್ಕೆ ವಿರುದ್ಧವಾಗಿ ಮದುವೆಯಾಗಬೇಕೆನ್ನುವ ನಾಯಕ. ಈ ಧೋರಣೆಯ ಸಾಧಿಸುವುದಕ್ಕಾಗಿಯೇ ತನ್ನ ಇಷ್ಟಕ್ಕಾಗಿ ಮನೆಯವರ ಇಷ್ಟದ ಕಮಲಿಯನ್ನು ತೊರೆಯುತ್ತಾನೆ. ಆಮೇಲೆ ಅವಳನ್ನೇ ಮದುವೆಯಾಗಿದ್ದರೆ ಬದುಕಿನಲ್ಲಿ ಸುಖವಾಗಿರುತ್ತಿದ್ದೆ ಎಂದು ಪರಿತಪಿಸುತ್ತಾನೆ. ಯೌವನದ ಹುಂಬುತನ, ಯೌವನ ಮಾಗಿದಾಗಿ ಒದಗುವ ಪ್ರಜ್ಞೆಯಿಂದ ಹಳೆಯದಕ್ಕೆ ಹಂಬಲಿಸುತ್ತಾನೆ. ಆದರೆ ಅದು ಕೈಗೆಟುಕುವುದು ಅಸಾಧ್ಯ. ವರ್ತಮಾನವನ್ನು ಸಖ್ಯಗೊಳಿಸಲು ಹೋಗಿ ಭೂತದ ಸಖ್ಯದೊಳಗೆ ಸಿಲುಕಿ ಹಳಹಳಿಸುವ ಕಾದಂಬರಿ ನಾಯಕನ ಪ್ರಜ್ಞಾಪ್ರವಾಹದ ಚಿತ್ರಣವಿದೆ. ಆ ಪ್ರವಾಹದಲ್ಲಿ ನಾಯಕ ತೇಲುತ್ತಾನೆ ಹೊರತು ದಡವನ್ನು ತಲುಪಲಾರನು.

ಯು.ಆರ್ ಅನಂತಮೂರ್ತಿಯವರ ಆರು ಕಾದಂಬರಿಗಳ ವಸ್ತುವಿನ್ಯಾಸವನ್ನು ಗಮನಿಸಿದಾಗ, ಎಲ್ಲ ಪಾತ್ರಗಳು 'ಸಾಮಾಜಿಕ ಚಲನೆ'(ಸೋಸಿಯಲ್ ಮೊಬಿಲಿಟಿ)ಗಾಗಿ ಅಪೇಕ್ಷಿಸುತ್ತವೆ. ಈ ಪ್ರಯತ್ನದಲ್ಲಿ ಬಹುಪಾತ್ರಗಳು ವೈಚಾರಿಕ ಮನೋಭಾವ(ಇಂಟಲೇಕ್ಚುವಲ್)ವನ್ನು ಪ್ರದರ್ಶಿಸುತ್ತವೆ. ಆ ಪ್ರಯತ್ನಗಳು ಹಲವು ಸಲ ಗುರಿಯನ್ನೇ ಮುಟ್ಟುವುದಿಲ್ಲ. ಆದರೆ ಆ ಪ್ರಯತ್ನದ ಕಾರ್ಯಚಟುವಟಿಕೆಗಳು ನಮ್ಮ ಗಮನ ಸೆಳೆಯುತ್ತವೆ. ಅವರ ಕಾದಂಬರಿಗಳ ಚರ್ಚೆ ಮುಖ್ಯವಾಗುವುದು ಕೂಡ 'ತೀವ್ರ ಬದಲಾವಣೆಗೆ ತುಡಿಯುವ ಕಾರಣದಿಂದ'. ಅನಂತಮೂರ್ತಿಯವರ ಕಾದಂಬರಿಗಳ ಪಾತ್ರಗಳ ಸೋಲಿಗೆ ಕಾರಣಗಳನ್ನು ಮೂರು ರೀತಿಯಾಗಿ ಗುರುತಿಸಬಹುದು. ಒಂದು: ನಾಯಕ, ಉಪನಾಯಕ ಪಾತ್ರಗಳು ಪಶ್ಚಿಮದ ಜೀವನಕ್ರಮವನ್ನು ಇಲ್ಲಿನ ಪ್ರಾಯೋಗಿಕ ಜೀವನ ಕ್ರಮವಾಗಿಸಲು ಪ್ರಯತ್ನಿಸುವುದು. ಎರಡು: ಸನಾತನ ವ್ಯವಸ್ಥೆಯ ಕರ್ಮಾಚರಣೆಗಳನ್ನು ನಿರಾಕರಿಸುವಾಗ ಆತುರವನ್ನು ತಾಳುವುದು. ಮೂರು: ವೈಚಾರಿಕ ಗಟ್ಟಿತನವನ್ನು ಪ್ರದರ್ಶಿಸಿದಂತೆ, ನೈತಿಕ ಗಟ್ಟಿತನದ ಸ್ವಭಾವವನ್ನು ಹೊಂದದೇ ಇರುವುದರಿಂದ, ಬಿರುಕು ವ್ಯಕ್ತಿತ್ವದವರಾಗಿ ಕಾಣುವುದು. ಪಶ್ಚಿಮವನ್ನು ಅನುಕರಿಸುವ ಪಾತ್ರಗಳ ಸೋಲು, ಪೌರಾತ್ಯ ಭಾರತದಲ್ಲಿ ಪಶ್ಚಿಮದ ಸೋಲಾಗಿದೆ. ಭಾವನಾತ್ಮಕ ಪ್ರಧಾನ, ಭೌತಿಕತೆ ಪ್ರಧಾನ ದೇಶಗಳ ಬದುಕನ್ನು ಏಕೀಭವಿಸುವಲ್ಲಿನ ಸಮಸ್ಯೆಗಳನ್ನು ಯು.ಆರ್ ಅನಂತಮೂರ್ತಿಯವರ ಕಾದಂಬರಿಗಳು ದರ್ಶನ ಮಾಡಿಸುತ್ತವೆ.

**ಪರಾಮರ್ಶನ ಗ್ರಂಥಗಳು**

೧. ಕರೀಗೌಡ ಬೀಚನಹಳ್ಳಿ : ವ್ಯಷ್ಟಿ-ಸಮಷ್ಟಿ

೨. ಎನ್.ಕೆ ಕೋದಂಡರಾಮ : ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ

೩. ಸಿ.ಎನ್ ರಾಮಚಂದ್ರನ್ : ಬಯಲು ರೂಪ (ಸಮಗ್ರ ವಿಮರ್ಶಾ ಸಂಕಲನ)

೪. ಸುಭಾಷ ರಾಜಮಾನೆ : ನಿರ್ದಿಗಂತವಾಗಿ ಏರಿ

೫. ನಟರಾಜ್ ಹುಳಿಯಾರ್ : ಲೇ: ಪ್ರಜಾವಾಣಿ, ಸಂಸ್ಕಾರ ಕಾದಂಬರಿಗೆ ೫೦ ವರ್ಷ, ೨೨/೭/೨೦೧೫

೬. ಕನ್ನಡ ಸಾಹಿತ್ಯ ಪರಿಷತ್ತು.ಇನ್

೭. ಪುಸ್ತಕಪ್ರೇಮಿ.ವರ್ಡ್ಪ್ರೆಸ್.ಕಾಮ್

೮. ಬುಕ್ ಬ್ರಹ್ಮ ವೆಬ್‌ಸೈಟ್

೯. ಗಿರಡ್ಡಿ ಗೋವಿಂದರಾಜ್: ಕಾದಂಬರಿ ವಸ್ತು ಮತ್ತು ತಂತ್ರ

೧೦. ಕೇಶವಶರ್ಮ ಶರ್ಮ ಕೆ. : ಕನ್ನಡ ಕಾದಂಬರಿಶಾಸ್ತ್ರ

೧೧. ಪ್ರಭುಶಂಕರ : ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ

೧೨. ನಟರಾಜ್ ಹುಳಿಯಾರ್ : ಆಫ್ರಿಕಾ ಮತ್ತು ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ ಮತ್ತು ಪರಂಪರೆ

೧೩. ಶಿವರಾಮ್ ಪಡಿಕ್ಕಲ್: ನಾಡು-ನುಡಿಯ ರೂಪಕ

೧೪. ಜಿ. ಎಸ್ ಆಮೂರ : ಕನ್ನಡ ಕಥನ ಸಾಹಿತ್ಯ : ಕಾದಂಬರಿ